ಬರಹಗಳ ತಾತ್ವಿಕತೆಯನ್ನು ಗುರುತಿಸುವುದಾದರೆ ಅದರಲ್ಲಿ ಬಹುತ್ವ ಶೋಧವು ಪ್ರಧಾನ ಎಳೆಯಾಗಿದೆ. ಹಾಗಾಗಿ 'ಬಹುತ್ವ ಕರ್ನಾಟಕ' ಕೃತಿಯು ಅವರ ಹಿಂದಿನ ಎಲ್ಲಾ ಅಧ್ಯಯನ ಚಿಂತನೆಗಳನ್ನು ಕಲಸಿ ಹದಗೊಳಿಸಿ ರೂಪಿಸಿದ ಆಕೃತಿಯಾಗಿದೆ. ಆದರೆ ಈ ಕೃತಿಯ ಸ್ವರೂಪ ಭಿನ್ನವಾಗಿದೆ. ಬಹುತ್ವ ಕರ್ನಾಟಕದ ಪರಿಕಲ್ಪನಾತ್ಮಕ ಚರ್ಚೆಯನ್ನು ಪ್ರಧಾನವಾಗಿ ಪರಿಕಲ್ಪನೆ, ಸಮಸ್ಯೆ, ಸಂಭವ, ಕಾಣ್ಕೆ ಎನ್ನುವ ನಾಲ್ಕು ಭಾಗಗಳಲ್ಲಿ ವಿಶ್ಲೇಷಿಸಿದ್ದಾರೆ. ಈ ನಾಲ್ಕು ಭಾಗಗಳಲ್ಲಿ ಮೂವತ್ತು ಬಿಡಿ ಲೇಖನಗಳ ಮಾದರಿಯಲ್ಲಿ ವಿಷಯವನ್ನು ವಿವರವಾಗಿ ಚರ್ಚಿಸಿದ್ದಾರೆ. ಈ ಲೇಖನಗಳಲ್ಲಿ 264 ಅಂಶಗಳ ವಿಷಯ ವೈವಿಧ್ಯವನ್ನು ಮಂಡಿಸಿದ್ದಾರೆ. ಅಗತ್ಯವಿದ್ದಲ್ಲಿ ಈ ಅಂಶಗಳಲ್ಲಿ ಐವತ್ತೆರಡು ಉಪ ವಿಭಾಗಗಳಲ್ಲಿ ವಿಶ್ಲೇಷಣೆಯನ್ನು ಮತ್ತಷ್ಟು ವಿಸ್ತರಿಸಿದ್ದಾರೆ. ಹೀಗೆ ಈರುಳ್ಳಿಯ ಪದರುಗಳಂತೆ ಬಹುತ್ವವು ಪದರು ಪದರುಗಳಲ್ಲಿ ಬಿಚ್ಚಿಕೊಳ್ಳುತ್ತಾ ಎದುರಾಗುತ್ತದೆ. ಒಂದು ಬಗೆಯಲ್ಲಿ ಸಂವಿಧಾನದ ಕಲಮುಗಳು ಅವುಗಳ ಉಪ ವಿಭಾಗಗಳು ಮತ್ತು ಪ್ರತ್ಯೇಕ ಟಿಪ್ಪಣಿಗಳ ಮಾದರಿಯಲ್ಲಿ ಜೋಡಿಸಿದ್ದಾರೆ.

ತರೀಕೆರೆಯವರು ಅರಿಕೆಯಲ್ಲಿ ಬರೆಯುತ್ತಾ, 'ಸಾಮಾನ್ಯವಾಗಿ ಜನಾಂಗವಾದಿ ಮತ್ತು ಮತೀಯ ರಾಷ್ಟ್ರವಾದಗಳು, ಒಂದು ರಾಷ್ಟ್ರ, ಒಂದು ಭಾಷೆ, ಒಂದು ಸಂಸ್ಕೃತಿ, ಒಂದು ಧರ್ಮ, ಒಂದು ನಾಗರಿಕ ಸಂಹಿತೆ, ಒಂದು ಪಕ್ಷ, ಒಂದು ಚುನಾವಣೆ, ಒಂದು ತೆರಿಗೆ ಪದ್ಧತಿ, ಒಬ್ಬ ನಾಯಕನ ಸಮೀಕರಣವನ್ನು ಜಪಿಸುತ್ತವೆ. ಮಾನವ ಏಕತೆಯನ್ನು ಧ್ವನಿಸಬೇಕಾದ 'ಒಂದುತನ'ವು, ಏಕರೂಪೀಕರಣದ ಆತಂಕ ಹುಟ್ಟಿಸುವ ರಣಹಲಗೆಯ ಸಪ್ಪಳವಾಗುತ್ತದೆ. ಅದರ ಕಠೋರ ಶ್ರುತಿಯಲ್ಲಿ, ಸ್ಥಳೀಯತೆ, ಜಾತ್ಯತೀತತೆ ಸಮಾನತೆ, ಫೆಡರಲಿಸಂ, ಲಿಂಗಸಮಾನತೆ, ಪ್ರಜಾಪ್ರಭುತ್ವಗಳನ್ನು ಗೇಲಿಗೊಳಿಸುವ ಧೋರಣೆ ಮೆರೆಯುತ್ತದೆ. ಇದು ಬಹುತ್ವ ತತ್ವಕ್ಕೆ ವ್ಯತಿರಿಕ್ತ ವಿದ್ಯಮಾನ. ಈ ಸಂದರ್ಭದಲ್ಲಿ, 'ಬಹುತ್ವ'ದಂತಹ ಒಳಗೊಳ್ಳುವ ಮತ್ತು ಕಟ್ಟುವ ಪರಿಕಲ್ಪನೆಗಳನ್ನು ಮರುರೂಪಿಸುವ ಜರೂರತ್ತಿದೆ' ಎನ್ನುತ್ತಾರೆ. ಹಾಗಾಗಿ ಈ ಇಡಿಯಾದ ಕಥನವು ಕಾಲದ ಬಿಕ್ಕಟ್ಟಿನ ಹೊಟ್ಟೆಯಲ್ಲಿ ಹುಟ್ಟಿ ಬಂದುದಾಗಿದೆ.




**ಬಹುತ್ವ ಕರ್ನಾಟಕ**
ಲೇ: ರಹಮತ್ ತರೀಕೆರೆ
ಪು: 264, ಬೆಲೆ: 300 ರೂ.
ಪ್ರಕಾಶನ: ಅಭಿನವ ಪ್ರಕಾಶನ, ಬೆಂಗಳೂರು
ಮೊಬೈಲ್: 9448804905

ಕಳೆದ ನಾಲ್ಕು ದಶಕಗಳಲ್ಲಿ ದಮನಿತ ಸಮುದಾಯಗಳು ಪ್ರತಿರೋಧದ ಬಹುಮುಖ್ಯ ಪರಿಭಾಷೆಯಾಗಿ ಬಹುತ್ವವನ್ನು ಮತ್ತೆ ಮತ್ತೆ ಬಳಸುತ್ತಿವೆ. ಬಹುತ್ವದ ನಾಶ ಅಸಾಧ್ಯವೆಂದರಿತ ದಮನಿಸುವ ಶಕ್ತಿಗಳೂ ಕೂಡ ತಮಗೆ ಬೇಕಾದ ಹಾಗೆ ಬಹುತ್ವದ ಪರಿಭಾಷೆಯನ್ನು ಮರುರೂಪಿಸುತ್ತಿವೆ. ಈ ಚಾರಿತ್ರಿಕ ರೂಪಾಂತರದ ಕಾಲಘಟ್ಟದಲ್ಲಿ ರಹಮತ್ ತರೀಕೆರೆಯವರ ಬಹುತ್ವ ಕುರಿತ ಅಧ್ಯಯನ